ಮಾತು, ಹೆಂಗಸು ಇಂವನ್ನ ಚುಲೋ ಮನಸ್ಸಾನೂ ಮಾಡ್ತಾಳ. ಕೆಟ್ಟ ಮನಸ್ಸಾನ್ನೂ ಮಾಡಾಕ ಪ್ರಯತ್ನ ಮಾಡ್ತಾಳ. ಅದಕ್ಕ ದೇವಪ್ಪ ನೀ ಬಾಳ ಹುಷಾರದಿಂದ ಇರಬೇಕು.'

ಗಿರಿಯಪ್ಪನಿಗೆ ದುಡ್ಡು ಕೊಡುವುದಕ್ಕೆ ಬೈಯುತ್ತಿದ್ದ ದೇವಪ್ಪ ಈ ಸಲ ತಾನೇ ಇನ್ನಷ್ಟು ದುಡ್ಡು ತೆಗೆದು ಅವನ ಕೈಗಿತ್ತ. ಗಿಳಿ ಗಿರಿಯಪ್ಪ ಮತ್ತಷ್ಟು ಸಂತುಷ್ಟನಾದ. ಒಂದು ಮನೆಯಿಂದ ಇಷ್ಟು ಆದಾಯ ಅವನ ಜೀವನದಲ್ಲಿಯೇ ಬಂದಿರಲಿಲ್ಲ. ಒಮ್ಮೊಮ್ಮೆ ಒಂದು ವರ್ಷ ದುಡಿದರೂ ಇಷ್ಟು ಹಣ ಸಿಕ್ಕುವುದಿಲ್ಲ. ಗಿಳಿಯವನಿಗೆ ಭವಿಷ್ಯ ಗೊತ್ತಿದ್ದರೆ ಅವನ್ಯಾಕೆ ಹೀಗೆ ತಿರುಗುತ್ತಾನೆಂದು ತನ್ನ ಬಗ್ಗೆ ಆಡಿಕೊಳ್ಳುವವರೆ ಹೆಚ್ಚಿರುತ್ತಾರೆ. ಅಂತಹುದರಲ್ಲಿ ಶಿವವ್ವ, ದೇವಪ್ಪ ಇಷ್ಟು ಪ್ರೀತಿ ಸುರಿಸಿದರೆಂದು ಅವನಿಗೆ ಹೃದಯ ತುಂಬಿ ಬಂತು. ತನ್ನ ಒಲವಿನ ಗಿಳಿಯ ಕಡೆ ನೋಡಿದ. ಅದೂ ಅವನನ್ನೇ ನೋಡುತ್ತಿತ್ತು. ಯಾರಿಗೆ ಗೊತ್ತು? ಆ ಗಿಳಿ ನಿಜವನ್ನೇ ಹೇಳಿರಬಹುದು! ತಾನು ತನ್ನ ಕಣ್ಣಿಗೆ ಕಾಣುವುದನ್ನು ಹೇಳಬಹುದು. ಆದರೆ ಮನುಷ್ಯರ ಮಾತು ಗೊತ್ತಿಲ್ಲದ ಗಿಳಿ ಮನುಷ್ಯರ ಜೀವನ ರಹಸ್ಯವನ್ನು ಏನೋ ಲೆಕ್ಕ ಹಾಕಿ ಹೇಳಿದರೂ ಹೇಳಬಹುದು. ಎಷ್ಟೋ ಸಲ ತನ್ನ ಗಿಳಿ ಹೇಳಿದ್ದು ಸತ್ಯವಾಗಿ ಪರಿಣಮಿಸಿದ್ದನ್ನು ಗಿರಿಯಪ್ಪನೆ ಕಣ್ಣಾರೆ ಕಂಡಿದ್ದಾನೆ. ಆದರೆ ಅವನು ಎಷ್ಟೇ ಸತ್ಯ ಹೇಳಿದರೂ ಜನ ನಂಬುವುದಿಲ್ಲ! ಅದು ಅವನಿಗೆ ಗೊತ್ತಿದೆ.

ಇತ್ತ ದೇವಪ್ಪನ ತಲೆಯಲ್ಲಿ ಅನೇಕ ಯೋಚನೆಗಳು ಗಿರಕಿ ಹೊಡೆಯುತ್ತಿದ್ದವು. ಗಿರಿಯಪ್ಪ ಹೇಳಿದಂತೆ ತನ್ನ ಮೂವರು ಗೆಳೆಯರು ಯಾರು? ಅಪಾಯ ತರುವವರು ಯಾರು? ತನ್ನನ್ನು ಕೊಲ್ಲಲು ಪ್ರಯತ್ನವೇನಾದರೂ ನಡೆದಿದೆಯೆ? ಮಲ್ಲೂರಿನಲ್ಲಿ ತನ್ನ ಸ್ನೇಹಿತರ ಪಟ್ಟಿ ಮಾಡತೊಡಗಿದ. ತನಗೆ ಮೂವರು ಅಲ್ಲ, ಮುನ್ನೂರು ಜನ ಸ್ನೇಹಿತರಿದ್ದಾರೆ. ಅವರಲ್ಲಿ ಮೂವರನ್ನು ಹೇಗೆ ಪತ್ತೆ ಹಚ್ಚುವುದು? ಹಿಂದೊಮ್ಮೆ ಮಲ್ಲೂರು ಎಂದರೆ ಕೊಲೆಗಳ ಊರು ಎಂದು ಹೆಸರಾಗಿತ್ತು. ಈಗ ತನ್ನ ಹೆಣವೆ ಬಿದ್ದರೆ? ಹಾಗೆ ನೋಡಿದರೆ ಅಲ್ಲಿ ತನಗೆ ಯಾರೂ ವೈರಿಗಳಿಲ್ಲ. ಎಲ್ಲರೂ ತನ್ನ ಸ್ನೇಹಿತರೆ. ಬಹಳ ಜನ ತನ್ನ ಮೇಲೆ ಅವಲಂಬಿತರಾಗಿದ್ದಾರೆ.

ತನ್ನ ಹೊಟೇಲ್ ಬಂದ ಮೇಲೆ ಊರವರಿಗೆ ಬಹಳ ಅನುಕೂಲವಾಗಿದೆಯೆಂದು ಬಹುತೇಕ ಎಲ್ಲರೂ ಹೇಳುತ್ತಾರೆ. ಹಾಗಿದ್ದೂ ತನ್ನ ಬಗ್ಗೆ ಮತ್ಸರ ಪಡುವವರು ಇದ್ದಾರೆಯೆ? ತಾನೇ ಹುಡುಕಿಹೋಗುವ ವಯಸ್ಸಾದ ಹೆಂಗಸು ಯಾರು? ಮಲ್ಲೂರಿನಲ್ಲಿ ತನಗೆ ಅಂತಹವರು ಯಾರೂ ಕಣ್ಣಿಗೆ ಬಿದ್ದಿಲ್ಲ. ಅಂದರೆ ತಾನು ಇಷ್ಟಪಡುವ ಮಹಿಳೆ ಇವಳು ಎಂದು ತಾನು ಇದುವರೆಗೂ ತಾನು ನೋಡಿಲ್ಲ. ಈ ಗಿಳಿ ಗಿರಿಯಪ್ಪ ಸುಮ್ಮನೆ ತಲೆಯಲ್ಲಿ ಹುಳು ಬಿಟ್ಟು ಹೋಗುವವನು. ಅಥವಾ ಹೀಗೂ ಹೇಳಿರಬಹುದು. ತಾನು ಹುಡುಕುತ್ತಿರುವ ಕನ್ಯೆ ತನಗಿಂತ ವಯಸ್ಸಾದವಳು ಅಂತ ಅರ್ಥವೆ? ಆಕೆಯೆ ಮುಂದೊಂದು ದಿನ ತನ್ನ ಏಳ್ಗೆಗೆ ಅಡ್ಡಾಗುತ್ತಾಳೆಯೆ? ಅಥವಾ ಆಕೆಯಿದ್ದೂ ಮತ್ಯಾರೋ ಗಂಟು ಬೀಳುತ್ತಾರೆಯೆ? ಮೊದಲೆ ಒಂದು ಹೆಣ್ಣು ಸಿಗಲು ಸಾಧ್ಯವಾಗುತ್ತಿಲ್ಲ. ಅಂತಹದುರಲ್ಲಿ ಈತ ಎರಡುಮೂರು ಎಂದು ಸುಮ್ಮನೆ ತನ್ನನ್ನು ಖುಷಿಪಡಿಸಲು ಹೇಳಿರಬಹುದೆಂದು ಅವನಿಗೆ ಖಂಡಿತವಾಗಿಯೂ ಅನಿಸಿತು.

ಗಿಳಿಶಾಸ್ತ್ರದವನು ಹೇಳಿ ಆಯಿತು, ಪಂಚಾಂಗದವನು ಹೇಳಿ ಆಯಿತು, ಹಿತೈಷಿಗಳು ಹೇಳಿ ಆಯಿತು. ಇನ್ನೇನು ಸ್ವಲ್ಪ ದಿನಗಳಲ್ಲಿ ತನ್ನ ಮದುವೆ ಆದಂತೆಯೆ ಎಂದು ಬಹುತೇಕರು ಶಕುನ ಹೇಳಿದ್ದರು, ಸುಳಿವು ನೀಡಿದ್ದರು. ಆ ಸುಳಿವುಗಳು ಏನಾದವು? ಏನಾದರೂ ಅಶುಭವಾಗುವುದಿದೆಯೆ? ದೇವಪ್ಪ ಬಸವಳಿದಿದ್ದ. ಅವನ ಕನ್ಯಾನ್ವೇಷಣೆ ನಡೆದೇ ಇತ್ತು. ಆ ಗಿಣಿಮೂಗಿನ ಗಿರಿಯಪ್ಪ ಎಲ್ಲಿದ್ದಾನೆ? ಯಾವೂರು ಅವನದು? ಅವನ ಕೊರಳ ಹಿಡಿದು ಕೇಳಿಬಿಡುತ್ತೇನೆ. ಏನೇನೋ ಹೇಳಿ ತಮ್ಮನ್ನು ನಂಬಿಸಿದ. ಸುಖಾಸುಮ್ಮನೆ ಅವನಿಗೆ ಅಷ್ಟೆಲ್ಲ ದುಡ್ಡು ಕೊಟ್ಟೆವು. ದೇವಪ್ಪ ಅವರಿವರ ಮೇಲಿಟ್ಟಿದ್ದ ನಂಬಿಕೆ ಜರ್‍ರನೆ ಕುಸಿಯಿತು. ಜನರನ್ನು ಮರುಳುಗೊಳಿಸುವ ವಿದ್ಯೆಯನ್ನು ಒಬ್ಬೊಬ್ಬರು ಎಷ್ಟು ಚೆಂದ ಕಲಿತಿರುತ್ತಾರೆ. ಮಗ ಶಾಸ್ತ್ರದವನನ್ನು ಎಷ್ಟೇ ಶಪಿಸಿದರೂ ತಾಯಿ ಮಾತ್ರ ಗಿಣಿಮೂಗಿನವನಲ್ಲಿ ವಿಶ್ವಾಸ ಕಳೆದುಕೊಂಡಿರಲಿಲ್ಲ.

'ಹಂಗ ಅನಬ್ಯಾಡೋ ಮಗನೆ. ಶಕುನದಾಗ ಒಂದಷ್ಟು ಖರೆ ಆಕ್ಕಾವು, ಒಂದಷ್ಟು ಸುಳ್ಳು ಅಕ್ಕಾವು. ಎಲ್ಲಾ ನಾವು ಎಣಿಸಿದಂಗ ನಡೆದಿದ್ದರ ಈ ಲೋಕ ಹೀಂಗ್ಯಾಕ ಇರ್ತಿತ್ತು ಹೇಳು. ಹಂಗ ಸಿಟ್ಟಿನ ಕೈಯಾಕ ಬುದ್ಧಿ ಕೊಡಬ್ಯಾಡ. ಯಾವುದೇ ಮನಸ್ಯಾನ ಒಮ್ಮೆಲೆ ಒರೆಸಿ ಒಗಿಬಾರದು. ಅವರೂ ಒಂದು ಲೆಕ್ಕದ ಮ್ಯಾಲ ಹೇಳಿರತಾರು'.

'ಹೂಂ. ಅಂವ ಹೇಳಿದ. ನೀ ಕೇಳಿದಿ. ನಾ ಬಡಕೊಂಡೆ. ಗುರುತುಪರಿಚಯ ಇಲ್ಲದವರನ್ನ ಹಂಗ ಮನಿಗಿ ಕರಿಬ್ಯಾಡಂತ. ನನ್ನ ಮಾತ ಎಲ್ಲಿ ಕೇಳ್ತಿ ನೀನು? ಅಂವಗ ಇಷ್ಟು ರೊಕ್ಕ ಕೊಟ್ಟೇವಿಯಂತ ಮಂದಿಗೆ ಗೊತ್ತಾದ್ರ ನಮ್ಮನ್ನು ಮೂರ್ಖರು ಅಂತಾರ'.

'ಅಲ್ಲಪಾ ಮಗನೆ, ಅಕ್ಕಿ ಕುದ್ದು ಅನ್ನ ಆಗಬೇಕಾದ್ರ ಕುದಿ ಎಸರು ಬರಬೇಕು. ನೀರು ಸಳಾಸಳಾ ಕುದೀಬೇಕು. ಕನ್ಯೆ ಸಿಗಲಿಲ್ಲಂತ ಗಿಣಿಶಾಸ್ತ್ರದವನ ಬೈಯ್ತಿ? ನಿನಗ ಸಿಗಲಿಲ್ಲಂದ್ರ ಅಂವೇನು ಮಾಡಬೇಕು. ಅವರ ಕೆಲಸ ನೂರಕ್ಕ ಒಂದು ರೂಪಾಯಿ ಇದ್ದಂಗ. ನಿನ್ನ ಕೆಲಸ ನೂರಕ್ಕ ತೊಂಬತ್ತೊಂಬತ್ತು ರೂಪಾಯಿ. ತಿಳಿತೇನು? ಹುಡುಗಿ ನಿನ್ನ ಮ್ಯಾಲ ಮನಸ್ಸು ಮಾಡುವಂಗ ನೀ ನಡಕೋ. ಒಬ್ಬರಿಗೆ ನಂಬಿಕೆ ಹುಟ್ಟಿಸುವಂಥ ಕೆಲಸ ಸರಳ ಇರೋದಿಲ್ಲಪಾ ಮಗನೆ.' ಅವ್ವನ ಮಾತು ಕೇಳಿ ಮಗನ ತಲೆ ಮೇಲೆ ಕೊಡ ನೀರನ್ನು ದಬದಬ ಸುರುವಿದಂತಾಯಿತು. ಹೌದಲ್ಲ. ತಾನು ಪ್ರಯತ್ನಪಡಲಾರದೆ ಇದು ಆಗಲಾರದು. ಒಬ್ಬ ತರುಣಿಯ ಮನಸ್ಸಿಗೆ ಒಪ್ಪಿಗೆಯಾಗುವ ತನಕ ಇದು ಕೈಗೂಡಲಾರದು. ಆತ ತನ್ನೊಳಗೆ ಮತ್ತಷ್ಟು ಉತ್ಸಾಹ ತುಂಬಿಕೊಳ್ಳಲು ಮುಂದಾದ. ಹೆಣ್ಣು ನೋಡಲು ಹೋದಾಗ ಲವಲವಿಕೆಯಿಂದಿರಲು ಯತ್ನಿಸತೊಡಗಿದ. ತಾನು ಎಷ್ಟೇ ನಿರಾಕರಣೆಗಳಿಗೆ ಒಳಗಾಗಲಿ, ತನ್ನ ಮನವಿಗಳು ಎಷ್ಟೇ ತಿರಸ್ಕೃತಗೊಳ್ಳಲಿ, ತನ್ನ ನಿರೀಕ್ಷೆಗಳು ಎಷ್ಟೇ ಕುಸಿತಗೊಳ್ಳಲಿ! ತಾನು ಸೋಲಬಾರದು!

ದೇವಪ್ಪನ ಮುಖದಲ್ಲಿನ ನೂರಾರು ಕಲೆಗಳನ್ನು ನೋಡಿದ ಬಹುತೇಕ ಹುಡುಗಿಯರು ಒಮ್ಮೆಲೆ ಆಘಾತಕ್ಕೆ ಒಳಗಾಗುವುದು ಸಹಜವಾಗಿತ್ತು. ಯಾವುದೋ ನಿರೀಕ್ಷೆ, ನಾಚಿಕೆ, ಸಂಕೋಚದೊಂದಿಗೆ ಆಗಮಿಸುವ ತರುಣಿ ಎಲ್ಲರಿಗೂ ವಂದಿಸಿ ತನ್ನನ್ನು ನೋಡಲು ಬಂದಿರುವ ತರುಣನತ್ತ ದೃಷ್ಟಿ ಹಾಸುವಳು. ಅವಳು ಹಾಗೆ ನೋಡಿದಾಗ ಅಲ್ಲಿ ಕಿರುನಗೆಯಲ್ಲಿ ತನ್ನನ್ನು ಅವಲೋಕಿಸುತ್ತಿರುವ ದೇವಪ್ಪ ಕಾಣುವನು. ಅವನನ್ನು ನೋಡಿದೊಡನೆ ಆಕೆಯ ಭಾವನೆಗಳಿಗೆ ಬಲವಾದ ಹೊಡೆತ ಬೀಳುತ್ತಿತ್ತು. ಅವಳ ಹೃದಯ ರಭಸದ ಪೆಟ್ಟು ತಿಂದು ಹೇಗೊ ಸಾವರಿಸಿಕೊಳ್ಳುತ್ತಿತ್ತು. ತನ್ನ ನಿರಾಕರಣೆಯನ್ನು ಇವರಿಗೆಲ್ಲ ಗೊತ್ತಾಗದಂತೆ ಹೇಗೆ ಅಡಗಿಸಿಡಲಿ ಎನ್ನುವ ಗಲಿಬಿಲಿ ಉಂಟಾಗುತ್ತಿತ್ತು. ಹುಡುಗಿಯಲ್ಲಿ ವಿಪರೀತ ತಳಮಳ ಉಂಟಾಗುತ್ತಿತ್ತು. ಎಲ್ಲರೂ 'ಯಪ್ಪಾ, ನಾ ಒಲ್ಲೆ' ಎನ್ನುವವರೆ. ಅನೇಕರ ಕಣ್ಣಿಂದ ದಳದಳ ನೀರು ಇಳಿಯುವುದು. 'ಶಿವಾ ಶಿವಾ, ಎಂತಹವನ್ನ ಕರಕೊಂಡು ಬಂದೀರಿ?' ಕನ್ಯೆಯ ಪಾಲಕರು ಅಂತಹವನನ್ನು ಕರೆತಂದಿದ್ದ ದುಂಡಪ್ಪನಿಗೆ ಬೈದು ಕಳಿಸಿದ ಉದಾಹರಣೆಗಳು ಇದ್ದವು.

ಒಂದೊಂದು ಸಲ ಹೀಗೂ ಆಗುತ್ತಿತ್ತು. ದೇವಪ್ಪನನ್ನು ನೋಡಿ ಹುಡುಗಿಯನ್ನು ತೋರಿಸುವ ಮೊದಲೆ 'ಆಕಿಗೆ ಯಾಕೋ ಆರಾಮ ಇಲ್ಲ', 'ನಮ್ಮ ಸಂಬಂಧಿಕರ ಫೋನ್ ಬಂದಿತ್ತು. ಸ್ವಲ್ಪ ಅರ್ಜೆಂಟ್ ಹೋಗಬೇಕಾಗೇದ.' ಎಂದೇನೊ ಹೇಳಿ ಸಾಗಹಾಕಿದ್ದರು. ಕೊನೆ ಗಳಿಗೆಯಲ್ಲಿ ಇವರು ತಮ್ಮನ್ನು ಎಷ್ಟು ದೈನ್ಯಕ್ಕೆ ದೂಡುತ್ತಾರಲ್ಲ. ದುಂಡಪ್ಪ, ದೇವಪ್ಪರಿಗೆ ಸಿಟ್ಟು ಬರುತ್ತಿತ್ತು, ಖರೆ. ಆದರೆ ಕೋಪವನ್ನು ನುಂಗಿಕೊಳ್ಳದೆ ಅವರಿಗೆ ಬೇರೆ ದಾರಿಯಿರಲಿಲ್ಲ. ಕಟ್ಟಕಡೆಯ ಪ್ರಯತ್ನವೆಂಬಂತೆ ಶಿವಪುತ್ರಪ್ಪ ಹೇಳಿದ ಅನಸವ್ವಳ ಊರಿಗೆ ಹೋದರು. ಅವಳ ಪಾಲಕರಿಗೆ ಹದಿನೈದು ದಿನಗಳ ಹಿಂದೆಯೆ ಶಿವಪುತ್ರಕಾಕಾ ಪತ್ರ ಬರೆದಿದ್ದ. ಆ ಊರಿಗೆ ಹೋಗಬೇಕಾದರೆ ನಾಲ್ಕು ಮೈಲು ನಡೆಯಬೇಕು. ನಡುವೆ ಒಂದು ದೊಡ್ಡ ಹಳ್ಳವನ್ನು ಧೋತರ, ಪಾಯಿಜಾಮ ಎತ್ತಿಕೊಂಡು ದಾಟಬೇಕು. ಅನುಸೂಯಳನ್ನು ನೋಡಿದ ಕೂಡಲೇ ದೇವಪ್ಪನ ಆಯಾಸವೆಲ್ಲ ಕರಗಿತು. ಆಕೆ ಅವನಿಗೆ ತುಂಬ ಇಷ್ಟವಾದಳು. ಇಂತಹ ಚೆಲುವೆಯೊಬ್ಬಳನ್ನು ತನಗೆ ತೋರಿಸುತ್ತಾರೆ ಎಂದು ಆತ ಎಂದೂ ಅಂದುಕೊಂಡಿರಲಿಲ್ಲ. ದೇವಪ್ಪನಿಗೆ ಇಷ್ಟವಾದಳು. ಅವರು ಒಳಗೆ ಹೋದವರು ಒಂದು ತಾಸಾದರೂ ಹೊರಗೆ ಬರಲಿಲ್ಲ. ದುಂಡಪ್ಪಕಾಕಾನಿಗೆ ನಿರಾಶೆ ಆಗತೊಡಗಿತ್ತು. ಇಲ್ಲಿಂದ ಖಾಲಿ ಕೈಯಿಂದ ಹೋದರೆ ಮತ್ತೆಂದೂ ದೇವಪ್ಪನಿಗೆ ಕನ್ಯೆ ಸಿಗಲಾರಳು.

'ಈ ಊರ ಹುಡುಗಿಯನ್ನು ಮಲ್ಲೂರಂತಹ ಒಳ್ಳೆಯ ಊರಿಗೆ

